## "ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ" ಯ ಅಧ್ಯಕ್ಷರಾದ ಮಾನ್ಯ ಶ್ರೀ. ಯಲ್ಲಪ್ಪರೆಡ್ಡಿ, ಭಾಅಸೇ, (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20-09-2008 ರಂದು ನೈಸ್ ಕಂಪನಿಯು ನಿರ್ಮಿಸುತ್ತಿರುವ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ರಸ್ತೆಯ ಅಭಿವೃದ್ಧಿಯಲ್ಲಿ, ಪರಿಸರಕ್ಕೆ ಆಗಬಹುದಾದ ಸಾಧಕ ಬಾಧಕಗಳ ಬಗ್ಗೆ ಸ್ಥಳ ಪರಿಶೀಲನಾ ಭೇಟಿಯ ನಡವಳಿಗಳು

ಹಾಜರಿದ್ದ ಸದಸ್ಯರು

| | |
|---|---|
| 1 | ಮಾನ್ಯ ಶ್ರೀ. ಎ.ಎನ್. ಯಲ್ಲಪ್ಪರೆಡ್ಡಿ, *ಭಾ.ಅ.ಸೇ (ನಿ)* ಅಧ್ಯಕ್ಷರು |
| 2 | ಶ್ರೀ. ಹೂಬರ್ಟ್<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಬಿಬಿಎಂಪಿ) |
| 3 | ಶ್ರೀ. ಎಂ.ಆರ್. ಸುರೇಶ್<br>ಸದಸ್ಯ ಕಾರ್ಯದರ್ಶಿ<br>ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಮಿತಿ |
| 4 | ಶ್ರೀ. ಗೋಪಾಲಕೃಷ್ಣ<br>ನೈಸ್ ಕಂಪನಿಯ ಅಭಿಯಂತರರು |
| 5 | ಶ್ರೀ. ಮಂಜುನಾಥ್<br>ಜಿ.ಎಂ. ಪಿ.ಆರ್.ಓ., ನೈಸ್ ಸಂಸ್ಥೆ |
| 6 | ಶ್ರೀ. ಇಸ್ಮಾಯಿಲ್<br>ತೋಟಗಾರಿಕಾ ಅಧಿಕಾರಿ, ನೈಸ್ ಸಂಸ್ಥೆ |
| 7 | ಶ್ರೀ. ಜಗದೀಶ್<br>ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಬಿಬಿಎಂಪಿ) |
| 8 | ಶ್ರೀ. ರವಿಕುಮಾರ್<br>ವಲಯ ಅರಣ್ಯಾಧಿಕಾರಿಗಳು (ಬಿಬಿಎಂಪಿ) |

ದಿನಾಂಕ: 20-09-2008 ರಂದು ಬೆಳಿಗ್ಗೆ 9.00 ಗಂಟೆಗೆ ಹೊಸೂರು ರಸ್ತೆ- ಎಲೆಕ್ಟ್ರಾನಿಕ್ ಸಿಟಿ - ನೈಸ್ ರಸ್ತೆಯಿಂದ ಪರಿವೀಕ್ಷಣೆ ಪ್ರಾರಂಭ ಮಾಡಲಾಯಿತು.

1. ನೈಸ್ ರಸ್ತೆಯು 50 ಮೀಟರಿಗಿಂತ ಅಧಿಕವಾಗಿ ಅಗಲವಿರುವ ಎಲ್ಲಾ ಕಡೆಗಳಲ್ಲಿ ಸಾಧ್ಯವಾದಷ್ಟು ಗುಂಡು ತೋಪುಗಳನ್ನು ಬೆಳೆಸಲು ನಿರ್ದೇಶಿಸಿದರು. ರಸ್ತೆ ಬದಿಯಲ್ಲಿ ಈಗಾಗಲೇ ಹಾಲಿ ಇರುವ ಗುಂಡು ತೋಪುಗಳನ್ನು ರಕ್ಷಣೆ ಮಾಡಿ ನಿರ್ವಹಣೆ ಮಾಡಬೇಕಾಗಿ ಆದೇಶಿಸಿದರು.

2. ಎಲೆಕ್ಟ್ರಾನಿಕ್ ಸಿಟಿ - ನೈಸ್ ರಸ್ತೆ ಪ್ರಾರಂಭದಲ್ಲಿರುವ ದೊಡ್ಡ ತೇಗೂರು ಕೆರೆಯನ್ನು ಅಭಿವೃದ್ಧಿಪಡಿಸಲು ಹಾಗೂ ಯಾವುದೇ ಮಾಲಿನ್ಯ ಪದಾರ್ಥಗಳನ್ನು ಕೆರೆಗೆ ಸೇರುವುದನ್ನು

ತಡೆಹಿಡಿಯಬೇಕೆಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನೈಸ್ ಸಂಸ್ಥೆಯ ಅಧಿಕಾರಿಗಳು ಈ ಕೆರೆಯನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದಿಂದ ತಮಗೆ ಹಸ್ತಾಂತರಿಸಿದ್ದಲ್ಲಿ ತಾವು ಅಭಿವೃದ್ಧಿಪಡಿಸಲು ಸಿದ್ಧವಿರುವುದಾಗಿ ತಿಳಿಸಿದರು.

3. ಈ ದೊಡ್ಡ ತೇಗೂರು ಕೆರೆಗೆ ಹೊಂದಿಕೊಂಡಂತೆ ಇರುವ ತ್ರಿಭುಜಾಕೃತಿಯ (Triangle Shape) ಸರ್ಕಾರಿ ಪ್ರದೇಶವನ್ನು ಒಂದು ವನವಾಗಿ ನಿರ್ಮಾಣ ಮಾಡಬೇಕೆಂದು ಸ್ಥಳದಲ್ಲಿ ಹಾಜರಿದ್ದ ಬಿಬಿಎಂಪಿ ಅಧಿಕಾರಿಗಳಿಗೆ ತಿಳಿಸಿದರು.

4. ನೈಸ್ ಸಂಸ್ಥೆಯು ರಸ್ತೆಯ ಇಕ್ಕೆಲಗಳಲ್ಲಿ ರಕ್ಷಣೆಗಾಗಿ ನಿರ್ಮಾಣ ಮಾಡಿರುವ ರೋಡ್ ಗಾರ್ಡ್‌ಗಳಿಗೆ ಬಳ್ಳಿಗಳಾದ ಬಿಗೋನಿಯಾ, ತನ್‌ಬರ್ಜಿಯಾ ಮುಂತಾದ ಬಳ್ಳಿಗಳನ್ನು ಬೆಳೆಸಲು ತಿಳಿಸಲಾಯಿತು.

5. ಪರಿವೀಕ್ಷಣೆಯನ್ನು ಬನ್ನೇರುಘಟ್ಟ ಕ್ರಾಸ್‌ವರೆಗೆ ಮುಂದುವರಿಸಿದ ಸಮಿತಿಯು ನೈಸ್ ಸಂಸ್ಥೆಯು ನಿರ್ಮಾಣ ಮಾಡಿರುವ ರಸ್ತೆ ಬದಿಯ ನೆಡುತೋಪನ್ನು ವೀಕ್ಷಿಸಿದರು. ಹೊಂಗೆ, ಬೇವು ಮುಂತಾದ ಜಾತಿಯ ಗಿಡಗಳ ಜೊತೆ ಹಣ್ಣಿನ ಗಿಡಗಳಾದ ನೇರಳೆ, ನೆಲ್ಲಿ, ಮುಂತಾದ ಗಿಡಗಳನ್ನು ಬೆಳೆಸಲು ಆದೇಶಿಸಿದರು. ಆಲ. ಬಸರಿ. ಅತ್ತಿ

6. ರಸ್ತೆ ಬದಿಯ ನೆಡುತೋಪುಗಳ ಮಧ್ಯದ ಖಾಲಿ ಪ್ರದೇಶದಲ್ಲಿ ಶ್ರೀಗಂಧದ ಬೀಜಗಳನ್ನು ಬಿತ್ತಿ ಬೆಳೆಸಬೇಕೆಂದು ಆದೇಶಿಸಿದರು.

7. ನೈಸ್ ರಸ್ತೆಯ ಎಡಬದಿಗಳಲ್ಲಿ ಅಲಲ್ಲಿ ಗೆದ್ದಲು ಹುತ್ತ (Ant hills) ಬೆಳೆದಿರುವುದು ಕಂಡು ಬಂದಿರುತ್ತದೆ. ಇದನ್ನು ಯಾವುದೇ ಕಾರಣಕ್ಕೂ ನಾಶ ಮಾಡದೆ ರಕ್ಷಣೆ ಮಾಡಲು ನಿರ್ದೇಶಿಸಲಾಯಿತು.

8. ಬನ್ನೇರುಘಟ್ಟ ರಸ್ತೆಯ ಬದಿಯಲ್ಲಿರುವ 80 ಎಕರೆ ಪ್ರದೇಶದ ಅರಣ್ಯ ಸಂಶೋಧನಾ ವಿಭಾಗದ ನೆಡುತೋಪಿಗೆ ಭೇಟಿ ನೀಡಿ ನೈಸ್ ಸಂಸ್ಥೆಯ ಅಧಿಕಾರಿಗಳಿಗೆ ನೆಡುತೋಪು ನಿರ್ಮಾಣದ ಬಗ್ಗೆ ಸ್ಥಳದಲ್ಲೇ ಮಾಹಿತಿ ನೀಡಲಾಯಿತು.

9. ನೈಸ್ ಸಂಸ್ಥೆಯು ಕೈಗೊಂಡಿರುವ ಮಳೆ ನೀರು ಸಂರಕ್ಷಣಾ ಕಾರ್ಯಕ್ರಮಗಳು ಇನ್ನೂ ಅಭಿವೃದ್ಧಿಯಾಗಬೇಕಾಗಿದ್ದು ರಸ್ತೆಯ ಮೇಲೆ ಬೀಳುವ ಎಲ್ಲಾ ಮಳೆ ನೀರನ್ನು ಸಂರಕ್ಷಿಸುವ ಕಾರ್ಯ ಕೈಗೊಳ್ಳಬೇಕೆಂದು ಆದೇಶಿಸಿದರು.

10. ಪರಿವೀಕ್ಷಣೆಯನ್ನು ಮುಕ್ತಾಯಗೊಳಿಸಿದ ಮಾನ್ಯ ಅಧ್ಯಕ್ಷರು ದಿನಾಂಕ: 12-09-2008 ಹಾಗೂ ದಿನಾಂಕ: 20-09-2008 ರ ಪರಿವೀಕ್ಷಣಾ ಸಮಯದಲ್ಲಿ ನೀಡಲಾದ ನಿರ್ದೇಶನಗಳಿಗೆ ಕೈಗೊಂಡ ಅನುಪಾಲನಾ ಕ್ರಮದ ಬಗ್ಗೆ ಸಮಿತಿಗೆ ಮುಂದಿನ 15 ದಿನಗಳೊಳಗೆ ವರದಿ ನೀಡಲು ನಿರ್ದೇಶಿಸಲಾಯಿತು.

ಅಧ್ಯಕ್ಷರು
ಸುಸ್ಥಿರ ಅಭಿವೃದ್ಧಿ ಅಧಿಕಾರಸ್ಥ ತಾಂತ್ರಿಕ ಸಲಹಾ ಸಮಿತಿ
ಬೆಂಗಳೂರು